ಛೇ! ಎಂಥಾ ಆಭಾಸವಾಯಿತು. ಇಂಥ ಪವಿತ್ರ ದಿನ ತನ್ನ ಬಾಯಲ್ಲಿ ಆ ಪ್ರಾಣಿಯ ಹೆಸರು ಬಂದುದಾದರೂ ಹೇಗೆ? ದೇವರೇ. ಇಂದ್ಯಾಕೆ ತನಗೆ ತಲೆ ಕೆಟ್ಟಿದೆ?

ಅನೀಸ್ ಕಿರುನಗೆ ಬೀರಿದ. “ಅಮ್ಮಿ... ನಿಮಗೆ ನೆನಪಿದೆಯಾ? ಅದೊಂದು ಸಾರಿ... ನಾನಿನ್ನೂ ಸೆವೆನ್ತ್‌ನಲ್ಲಿದ್ದೆ ಅನಿಸುತ್ತೆ... ನಾನು ಮತ್ತೆ ಸಾದಿಕ್ ಜಗಳ ಆಡ್ತಿದ್ವಿ... ಸಂಜೆ ಹೊತ್ತು... ಜಗಳದಲ್ಲಿ ಅವನು ನನಗೆ ಸುವ್ವರ್ ಅಂದ, ಅಬ್ಬೂನ ಬೆಲ್ಟ್‌ನಿಂದ ನೀವು ನಮಗೆ ಗ್ರಹಚಾರ ಬಿಡಿಸಿ, ಹೇಳಿಕೊಟ್ರಿ... ಹಾಗೆ ಹೇಳಬಾರದು ಬುರಾ ಜಾನ್ವರ್ ಅಂತ ಹೇಳಬೇಕೊಂತ... ಈವತ್ತು ಸಂಜೆ ಹೊತ್ತು... ಆ ಶಬ್ದ ನೀವು ಹೇಳಿ ಮನೆಯ ಬರಕತ್ತೇ ಹೋಗೊ ಕೆಲಸ ಮಾಡಿದೀರಲ್ಲ...'' ಎಂದ. ಅವನ ಸ್ವಭಾವವೇ ಹಾಗೆ, ಎಂಥಾ ಸಂದರ್ಭದಲ್ಲೂ ಕೀಟಲೆ ಬಿಡೋದಿಲ್ಲಾ. ಅನೀಸ್‌ನ ಮಗ ಕೇಳಿದ, “ಬುರಾಜಾನ್ವರ್ ಅಂದ್ರೆ ಏನು ಪಪ್ಪ?”

ಆ ಮಗುವಿಗೆ ಯಾರೂ ಉತ್ತರಿಸಲಿಲ್ಲ. ಅಷ್ಟರಲ್ಲೇ... ಬೆಲ್ ಆಯಿತು. ದಾವೂದ್ ಎಂದಿನ ಹರ್ಷ ಚಿತ್ತದಿಂದಲೇ ದಯ ಮಾಡಿಸಿದ. ಒಂದೇ ಕ್ಷಣದಲ್ಲಿ ಆಕೆ ಎಂದಿಗಿಂತ ಹೆಚ್ಚಿನ ಸಿಡಿಮದ್ದಾಗಿದ್ದಾಳೆ ಎಂದೆನಿಸಿತವನಿಗೆ. ಹೀಗಾಗಿ ಅವಳ ಬಾಯಿಗೆ ಈಡಾಗುವುದು ತರವಲ್ಲವೆನಿಸಿತು. ಆತ ನೇರವಾಗಿ ಡೈನಿಂಗ್ ಟೇಬಲ್ ಬಳಿ ಹೋದ. ಅವನು ಬಂದ ಮೇಲೆ ಮನೆ ಯಾಜಮಾನ ಅನ್ನಿಸಿಕೊಂಡವನು ಈ ಬಗ್ಗೆ ಒಂದು ಮಾತನ್ನೂ ಆಡಬಾರದೇ? ದಾವೂದ್‌ನಂತೂ ಎಂದಿನ ಹೊಟ್ಟೆಬಾಕ. ತಿಂದು ತೇಗಿ ಹೊರಬಂದ ನಂತರ ಕೇಳಿದ.

“ಏನು ಭಾಬಿ.... ತುರ್ತುಕರೆ ಮಾಡಿದೀರಿ, ತಮ್ಮ ದರ್ಬಾರಿನಲ್ಲಿ ಹಾಜರಾಗಿದೀನಿ. ಏನು ಬೇಕಾದರೂ ಸಜೆ ಜಾರಿ ಮಾಡಿ...''

''ಸಾಕಪ್ಪಾ ನಿನ್ನ ನಾಟಕ. ಕೂತ್ಕೋ ಅಲ್ಲಿ, ಎಷ್ಟು ಸಾರಿ ಹೇಳಿದೀನಿ. ಅದು ಹೇಗ್ಹೇಗೋ ಪಕ್ಕದ ಸೈಟನ್ನು ಮಾಡ್ಕೊಂಡಿದೀಯಾ ನಿಂದೂಂತ. ಹಿಂದೆ ಬೆಳದಿರೋ ಕಾಡು ನೋಡಿದ್ರೆ.... ಹಾವು–ಗೀವು ಸೇರ್ಕೊಳ್ಳೊದಂತೂ ಖಚಿತ. ಮಕ್ಕಳು–ಮರಿ ಆಟವಾಡೋ ಜಾಗ, ಕ್ಲೀನ್ ಮಾಡಿಸು ಅಂತ ಎಷ್ಟು ಸಾರಿ ಬಡಕೊಂಡಿದೀನಿ...''

''ಭಾಬಿ... ಭಾಬಿ... ಪ್ಲೀಸ್... ಸ್ವಲ್ಪ ತಾಳಿ... ಅದ್ಹೇಗ್ಹೇಗೋ ಪಡಕೊಂಡಿದ್ದಲ್ಲಾ... ಕ್ರಮಬದ್ಧವಾಗಿ...''

''ನಂಗೊತ್ತಿಲ್ವೇ... ಎಷ್ಟು ಕ್ರಮಬದ್ಧ... ಅಂತಾ... ನನಗೆ ಅಗ್ರಿಮೆಂಟಾಗಿದ್ದ ಸೈಟನ್ನು ನೀನು ಎಗರಿಸಿದ್ದೂ ಸಾಲದೆ... ಈ ರಂಜಾನಿನಲ್ಲಿಯೂ ಇಷ್ಟು ಸುಳ್ಳು ಹೇಳ್ತೀಯಲ್ಲಾ... ಅವನನ್ನಾದರೂ ನೋಡಿ... ಸ್ವಲ್ಪ ಹೆದರು...'' ಎಂದು ತಾರಸಿಯತ್ತ ಕೈ ತೋರಿದಳು.

“ಹೌದಲ್ಲಾ... ಅವನನ್ನೇ ನೋಡಲು ಇನ್ನಿಲ್ಲದ ಪ್ರಯತ್ನ ನಡೆಸ್ತಿದೀನಿ... ಇದುವರೆಗೂ ಅವನನ್ನು ನೋಡಲಾಗಲೇ ಇಲ್ಲ. ಇಲ್ಲಾದರೂ ಕಾಣಿಸ್ತಾನೆಯೇ...” ಎಂದು ತಾರಸಿಯತ್ತ ದೃಷ್ಟಿ ಬೀರುತ್ತಾ ಅವ ಕೇಳಿದ. ಅವಳಂತೂ ನಗುವ ಮೂಡ್‌ನಲ್ಲಿಯೇ ಇರಲಿಲ್ಲ. ನೇರ ವಿಷಯಕ್ಕೆ ಬಂದಳು.

“ನೋಡು... ನೀನು ನನಗೆ ಮಾಡಿರುವ ಮೋಸನಾ ಆ ಅಲ್ಲಾಹನೇ ಖಿಯಾಮತ್ ದಿನ ತೀರ್ಮಾನ ಮಾಡಲಿ. ಆ ವಿಷಯವನ್ನು ಅವನಿಗೇ ಬಿಡ್ತೀನಿ ನಾನು. ಆದರೆ ಇವೊತ್ತು... ಇವೊತ್ತು... ನಿನ್ನ ಸೈಟಿನ ಆ ಕಾಡಿನಲ್ಲಿ ಹೆಣ ಕೊಳೆತ ದುರ್ವಾಸನೆ... ನಮಗೆ ಮನೇಲಿರೋಕಾಗಲ್ಲ... ರಂಜಾನ್ ತಿಂಗಳಿನಲ್ಲಿ ರೋಜಾ ಇರೋರಿಗೆ ಇಷ್ಟು ಹಿಂಸೆ ಕೊಡ್ತೀದೀಯಲ್ಲಾ... ಇಫ್ತಾರ್ ಮಾಡಿ ಒಂದಗಳು ಅನ್ನ ಬಾಯಿಗಿಡಕ್ಕಾಗಿಲ್ಲ ಗೊತ್ತಾ?” ಎಂದು ಸ್ವಮರುಕದಿಂದ ಬಳಲಿದಳು.

ಅವನು ತೀರಾ ಕೂಲಾಗಿ, “ತಾಳಿ... ತಾಳಿ... ನಾನು ನೋಡಿ ಬರ್ತೀನಿ. ನೀವೇನು ಟೆನ್ಷನ್ ತಗೋಬೇಡಿ” ಎಂದು ಸರಸರನೆ ಹಿಂಬದಿಯ ಬಾಗಿಲನ್ನು ತೆರೆದು ಅಂಗಳಕ್ಕಿಳಿದ. ಮೊದಲೇ ಸಿದ್ಧ